50 ಸುವರ್ಣ ಸಂಭ್ರಮ

## ನಿಮ್ಮೊಡನೆ

# ಶಿಕ್ಷಕನೆಂದರೆ ಬಾಣಸಿಗನಲ್ಲ!

ಶಿಕ್ಷಕ ಸಮುದಾಯ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಒತ್ತಡಕ್ಕೆ ಒಳಗಾಗಿರುವುದು ಸುಳ್ಳಲ್ಲ. ಇದಕ್ಕೆ, ಬದಲಾವಣೆಗೆ ಒಳಗಾದ ಶೈಕ್ಷಣಿಕ ನೀತಿ ಒಂದು ಕಾರಣವಾದರೆ, ಇದಕ್ಕೂ ಮಿಗಿಲಾದ ಮತ್ತೊಂದು ಮುಖ್ಯ ಕಾರಣ ಪಾಠಕ್ಕೆ ಹೊರತಾದ ಅನ್ಯ ಕಾರ್ಯಗಳ ಹೊರೆ. ಜನಗಣತಿ, ಮಕ್ಕಳ ಗಣತಿ, ಮತದಾರರ ಪಟ್ಟಿ ಪರಿಷ್ಕರಣೆ, ಶಾಲಾ ಲೆಕ್ಕಪತ್ರ ನಿರ್ವಹಣೆ, ಶಾಲಾಭಿವೃದ್ಧಿ ಸಮಿತಿ ಕೈಗೊಳ್ಳುವ ಕಾರ್ಯಚಟುವಟಿಕೆಗಳ ಜವಾಬ್ದಾರಿ, ಮಕ್ಕಳ ಹಾಜರಾತಿ ಹೆಚ್ಚಿಸುವ ಸಂಬಂಧ ಬಗೆಬಗೆಯ ಹೆಸರುಗಳಲ್ಲಿ ಹಮ್ಮಿಕೊಳ್ಳುವ ಆಂದೋಲನಗಳು... ಹೀಗೆ ಒಂದೇ ಎರಡೇ. ಎಲ್ಲದಕ್ಕೂ ಶಿಕ್ಷಕರೇ ಹೆಗಲು ಕೊಡಬೇಕು. ಇದರ ಜೊತೆಗೆ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯದಂಥ ಕಾರ್ಯಕ್ರಮಗಳ ಅನುಷ್ಠಾನದ ಹೊಣೆ!

ಚುನಾವಣೆ ಹೊರತುಪಡಿಸಿ ಅನ್ಯ ಉದ್ದೇಶಗಳಿಗೆ ಶಿಕ್ಷಕರನ್ನು ಬಳಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆಯಾದರೂ ಅದು ಪೂರ್ಣಪ್ರಮಾಣದಲ್ಲಿ ಪಾಲನೆ ಆಗುತ್ತಿಲ್ಲ. ಸಂಖ್ಯೆಯಲ್ಲಿ ಶಿಕ್ಷಕರು ಹೆಚ್ಚಿಗೆ ಇದ್ದಾರೆಂಬ ಕಾರಣಕ್ಕೊ ಅಥವಾ ಜನಸಮುದಾಯದಲ್ಲಿ ಅವರ ಬಗ್ಗೆ ಗೌರವ ಇರುವುದರಿಂದ ಅವರ ಮಾತಿಗೆ ಕಿಮ್ಮತ್ತು ದೊರೆಯುತ್ತದೆ ಎಂಬ ಭಾವನೆಯಿಂದಲೊ ಸರ್ಕಾರದ ಬಹುಪಾಲು ಕಾರ್ಯಗಳಿಗೆ ಅವರ ಸೇವೆಯನ್ನೇ ಬಳಸುವುದು ರೂಢಿಯಾಗಿದೆ. ಮಕ್ಕಳ ಭವಿಷ್ಯದ ಬುನಾದಿ ಭದ್ರಪಡಿಸುವ ಗುರುತರ ಕೆಲಸ ಮಾಡಬೇಕಾದ ಶಿಕ್ಷಕರ ಸೇವೆ, ಅನ್ಯ ಕಾರ್ಯಗಳಿಗೆ ಹೀಗೆ 'ದುರ್ಬಳಕೆ' ಆಗುವುದು ತಪ್ಪಬೇಕು. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪದ್ಧತಿ ಜಾರಿಗೊಂಡ ನಂತರ ಶಿಕ್ಷಕರ ಹೊಣೆಗಾರಿಕೆ ಹೆಚ್ಚಿದೆ. ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅನುವಾಗುವ ರೀತಿಯಲ್ಲಿ ಸರ್ಕಾರದ ನೀತಿ–ನಿಲುವುಗಳು ಬದಲಾಗಬೇಕು.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದಿಂದ ಸಣ್ಣ ಮಟ್ಟದಲ್ಲಾದರೂ ಪೂರಕ ಸ್ಪಂದನ ವ್ಯಕ್ತವಾಗಿರುವುದು ಸಂತೋಷದ ಸಂಗತಿ. ಮುಂದಿನ ತಿಂಗಳು ಆರಂಭವಾಗಲಿರುವ ಜಾತಿ ಗಣತಿ ಕಾರ್ಯಕ್ಕೆ ಶಿಕ್ಷಕರ ಸೇವೆಯನ್ನು ಬಳಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇದು ಸ್ವಾಗತಾರ್ಹ ನಿರ್ಧಾರ. ಮುಖ್ಯಮಂತ್ರಿಗಳ ಹೇಳಿಕೆ ಹೊರಬಿದ್ದ ಬೆನ್ನಿಗೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು, ಬಿಸಿಯೂಟ, ಕ್ಷೀರಭಾಗ್ಯ ಕಾರ್ಯಕ್ರಮಗಳಿಂದ ಶಿಕ್ಷಕರನ್ನು ಮುಕ್ತಗೊಳಿಸುವ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ಹೇಳಿದ್ದಾರೆ. ಇದು ಕೂಡ ಆಗಬೇಕಾಗಿರುವ ಕೆಲಸವೇ. ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ಶಿಕ್ಷಕರಿದ್ದಾರೆ. ಆದರೆ ಅದು ಮಕ್ಕಳ ಕಲಿಕೆಗೆ ಒದಗಿಬರುತ್ತಿಲ್ಲ. ಫಲಿತಾಂಶದಲ್ಲಿ ಬಿಂಬಿತವಾಗುತ್ತಿಲ್ಲ. ಇದಕ್ಕೆ ಒಂದು ಕಾರಣ ಶಿಕ್ಷಕರ ಹೆಗಲೇರಿರುವ ಅನ್ಯ ಕಾರ್ಯಗಳ ಹೊರೆ. ಈ ಭಾರ ಇಳಿಸುವ ಯಾವುದೇ ಉಪಕ್ರಮವನ್ನು ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಒಂದು ಮಹತ್ವದ ಹೆಜ್ಜೆ ಎಂದೇ ಪರಿಗಣಿಸಬೇಕಾಗುತ್ತದೆ. ಬೇರೆ ಉದ್ದೇಶಗಳಿಗೆ ಬಳಕೆಯಾಗುವ ಸಮಯದಲ್ಲಿ ಸ್ವಲ್ಪ ಭಾಗವನ್ನಾದರೂ ಮಕ್ಕಳ ಬೌದ್ಧಿಕ ಮಟ್ಟದ ಹೆಚ್ಚಳಕ್ಕೆ ಬೇಕಾದ ಚರ್ಚೆ, ಅಧ್ಯಯನಗಳಿಗೆ ವಿನಿಯೋಗಿಸಿದರೆ ಶಿಕ್ಷಕರ ಸೇವೆ ಅಷ್ಟರಮಟ್ಟಿಗೆ ಸಾರ್ಥಕವಾಗಲಿದೆ.

ಶಾಲೆಗಳಿಗೆ ಬಿಸಿಯೂಟ ಪೂರೈಸುವ ಹೊಣೆಯನ್ನು ಅನೇಕ ಕಡೆ ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಲಾಗಿದೆ. ಪೂರೈಕೆದಾರರಿಗೇ ನಿರ್ವಹಣೆಯ ಜವಾಬ್ದಾರಿಯನ್ನೂ ವಹಿಸಬಹುದು. ಬಿಸಿಯೂಟದ ಅವಘಡಗಳು ರಾಜ್ಯದ ಎಲ್ಲೆಡೆಯಿಂದ ಪದೇ ಪದೇ ವರದಿಯಾಗುತ್ತಿವೆ. ಹಸಿವು ನೀಗಿಸಬೇಕಾದ ಊಟ, ಮಕ್ಕಳ ಉಸಿರುಗಟ್ಟಿಸಬಾರದು. ಇದು ಗಂಭೀರ ಸಮಸ್ಯೆ. ನಿರ್ವಹಣೆಯಲ್ಲಿ ಮತ್ತಷ್ಟು ಮುತುವರ್ಜಿ ಮತ್ತು ಎಚ್ಚರ ವಹಿಸಿದರೆ ಅವಘಡಗಳೂ ನಿವಾರಣೆಯಾಗಬಹುದು. ಈ ವಿಚಾರದಲ್ಲಿ ತಜ್ಞರ ಜೊತೆ ಸಮಾಲೋಚಿಸಿ ಸರ್ಕಾರ ಮುಂದಿನ ಹೆಜ್ಜೆ ಇಡಬಹುದು.

ಹೊಸದಾಗಿ ನೇಮಕವಾಗುವ ಶಿಕ್ಷಕರು ಒಂದೇ ಸ್ಥಳದಲ್ಲಿ ಮೂರು ವರ್ಷ ಸೇವೆ ಸಲ್ಲಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ. ಅಲ್ಲದೇ ಇಲಾಖೆಯ ವಿವಿಧ ಹಂತದ ಕಚೇರಿಗಳಲ್ಲಿ ಕೆಲಸ ನಿರ್ವಹಿಸುವ ಆಡಳಿತ ಸಿಬ್ಬಂದಿ ಒಂದೇ ಕಡೆ ಮೂರು ವರ್ಷಕ್ಕಿಂತ ಹೆಚ್ಚು ಅವಧಿಗೆ ಸೇವೆ ಸಲ್ಲಿಸಿದ್ದರೆ ಅಂಥವರನ್ನು ಬೇರೆ ಕಡೆಗೆ ವರ್ಗಾಯಿಸಲಾಗುವುದು ಎಂದೂ ಶಿಕ್ಷಣ ಸಚಿವರು ಹೇಳಿದ್ದಾರೆ. ಈ ನಿಯಮ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಅನ್ವಯವಾಗಲಿದೆಯಂತೆ. ಶಿಕ್ಷಕರ ವರ್ಗಾವಣೆ ಮತ್ತಿತರ ಆಡಳಿತಾತ್ಮಕ ವಿಷಯಗಳಲ್ಲಿ ಭ್ರಷ್ಟಾಚಾರ ನಿಗ್ರಹಿಸುವ ಈ ಉದ್ದೇಶ ಫಲಿಸಬೇಕಾದರೆ ಇಲಾಖೆಯ ಉನ್ನತ ಅಧಿಕಾರಿಗಳಲ್ಲಿ ಬದ್ಧತೆ ಮತ್ತು ಇಚ್ಛಾಶಕ್ತಿ ಇರಬೇಕು. ಒಟ್ಟಿನಲ್ಲಿ ಶಿಕ್ಷಣ ಇಲಾಖೆಗೆ ಹೊಸ ಚೈತನ್ಯ ತುಂಬುವ ಚಿಂತನೆ ಆದಷ್ಟು ಬೇಗ ಕ್ರಿಯೆಗೆ ಇಳಿಯಲಿ. ಶಿಕ್ಷಣದ ಗುಣಮಟ್ಟದಲ್ಲಿ ಅದು ಪ್ರತಿಫಲಿಸಲಿ.

■ ಎನ್.ಉದಯಕುಮಾರ್

ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ಶಿಕ್ಷಕರಿದ್ದಾರೆ. ಆದರೆ ಅದು ಮಕ್ಕಳ ಕಲಿಕೆಗೆ ಒದಗಿಬರುತ್ತಿಲ್ಲ. ಫಲಿತಾಂಶದಲ್ಲಿ ಬಿಂಬಿತವಾಗುತ್ತಿಲ್ಲ. ಇದಕ್ಕೆ ಒಂದು ಕಾರಣ ಶಿಕ್ಷಕರ ಹೆಗಲೇರಿರುವ ಅನ್ಯ ಕಾರ್ಯಗಳ ಹೊರೆ. ಈ ಭಾರ ಇಳಿಸುವ ಯಾವುದೇ ಉಪಕ್ರಮವನ್ನು ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಒಂದು ಮಹತ್ವದ ಹೆಜ್ಜೆ ಎಂದೇ ಪರಿಗಣಿಸಬೇಕಾಗುತ್ತದೆ.

